# ಕಥೆ ಕದ್ದ ಪ್ರಸಂಗವು

ನಾಯಕ ಮೊಬೈಲ್ ಸಿಕ್ಕಿಸಿಕೊಂಡಿದ್ದುದು ಭುಜಕ್ಕೆ. ಅಪರೂಪಕ್ಕೆಂಬಂತೆ ಮಲ್ಲೇಶ್ವರದ ದೇವಸ್ಥಾನದಲ್ಲಿ ಸಿನಿಮಾ ಮುಹೂರ್ತ ನಡೆಯುತ್ತಿತ್ತು. ಅರ್ಚಕರೂ ಸೇರಿದಂತೆ ಇದ್ದ ಬೆರಳೆಣಿಕೆ ಜನರಿಗೆ ನಾಯಕಿ ಯಾರೆಂದು ನೋಡುವ ತವಕ. ಸುದ್ದಿಮನೆಯವರಿಗೆ ಮಾತ್ರ ವಿವಾದದ ಗಾಯ ಎಷ್ಟಗಲ ಆಗಿದೆ ಎಂದು ಹಣಕುವ ಸಹಜ ಆಸಕ್ತಿ. 'ತಮಿಳುನಾಡಿನವರಂತೆ ಇದ್ದಾರಲ್ಲವೇ ಈ ನಿರ್ದೇಶಕ' ಎಂದು ಯಾರೋ ಒಬ್ಬರು ಕಿಚಾಯಿಸಿದಾಗ, 'ಕನ್ನಡದವನೇ ಆಗಿಬಿಟ್ಟಿದ್ದೇನೆ, ಸ್ವಾಮಿ' ಎಂದು ವಿನಯದ ದನಿಯಲ್ಲಿ ಅವರು ಪ್ರತಿಕ್ರಿಯಿಸಿದರು.

ಆ ಕಾಲಘಟ್ಟದಲ್ಲಿ ಓಡುವ ಕುದುರೆಯಾಗಿದ್ದ ನಟನ ಕಾಲ್ ಷೀಟ್ ಸಿಕ್ಕಿದ ಖುಷಿ ಅವರಿಗೆ ಒಂದು ಕಡೆ. ಬೇರೊಬ್ಬ ಪಳಗಿದ ನಿರ್ದೇಶಕರು ತಮ್ಮ ಕಥೆಯನ್ನು ಕದ್ದು, ಈ ಚಿತ್ರ ಮಾಡಲು ಹೊರಟಿದ್ದಾರೆ ಎಂದು ಮಾಡಿದ್ದ ಆರೋಪ ಕುರಿತ ಚಿಂತೆ ಇನ್ನೊಂದು ಕಡೆ. 'ಕಥೆಗಳು ಹೀಗೆ ಸಿಂಕ್ ಆಗ್ತಾ ಇರ್ತವೆ' ಎಂದು ಜಾರಿಸಿ, ಮಾತನಾಡುವ ನಿರ್ದೇಶಕರ ಉತ್ಸಾಹಕ್ಕೆ ಕೂಡ ಅಲ್ಲಿ ಉಳಿದವರಿಂದ ಬೆಂಬಲ ಸಿಗಲಿಲ್ಲ. ಒಂದೇ ಕಥೆಯನ್ನು ಇಬ್ಬಿಬ್ಬರು ನಿರ್ದೇಶಕರ ತಲೆಗಳು ಏಕಕಾಲದಲ್ಲಿ ಯಾಕೆ ಯೋಚಿಸಬಾರದು ಎಂಬ ಇನ್ನೊಂದು ತರ್ಕಕ್ಕೂ ಒಪ್ಪಿಗೆಯ ಮುದ್ರೆ ಸಿಗಲಿಲ್ಲ.

ಬೆಂಗಳೂರಿನ ಗಾಂಧಿನಗರದಲ್ಲಿ ಕಥೆಗಳು ಎಲ್ಲಿಂದ ಹೇಗೆಲ್ಲಾ ಲೀಕ್ ಆಗಿ, ರೆಕ್ಕೆಪುಕ್ಕ ಪಡೆದುಕೊಳ್ಳುತ್ತವೆ ಎನ್ನುವುದನ್ನೇ ಚಿತ್ರ ಮಾಡಲು ಬೇರೊಬ್ಬ ನಿರ್ದೇಶಕರು ಯೋಚಿಸಿದ್ದನ್ನು ಕೆಲವರು ಉದಾಹರಿಸಿದರು. 'ಕಥೆ ಕದಿಯುವುದು ಬೇರೆ; ವಿವರಗಳ ಸಮೇತ ಅದರ ಆತ್ಮವನ್ನೂ ಕದಿಯುವುದು ಬೇರೆ' ಎಂಬ ಮತ್ತೊಂದು ವಾದ. 'ಸ್ವಂತ ಪಿಕ್ಚರ್ ಮಾಡಲು ಹೊರಟಾಗಲೂ ಹೀಗೆಲ್ಲ ವಿಘ್ನಗಳು ಬರುತ್ತಿವೆ. ನಾನೇನು ರೀಮೇಕ್ ಮಾಡುತ್ತಿರುವೆನೇ? ಅದನ್ನು ಮಾಡಿದರೆ ಯಾರೂ ತಕರಾರು ತೆಗೆಯುವುದಿಲ್ಲ' ಎಂದು ಆ ನಿರ್ದೇಶಕರು ವಿಷಯಾಂತರ ಮಾಡುವ ವಿಫಲ ಯತ್ನವನ್ನೂ ನಡೆಸಿದರು. ಅದೂ ಗಿಟ್ಟಲಿಲ್ಲ.

ಮುಹೂರ್ತದ ದಿನ ದೇವರ ಪ್ರಸಾದ ತಿಂದು, ಒಳ್ಳೆಯದಾಗುತ್ತದೆ ಎಂದು ನಂಬಿದ್ದ ಅದೇ ನಿರ್ದೇಶಕರು ಕಥೆ ಕದ್ದಿರುವುದು ಕೆಲವು ದಿನಗಳ ನಂತರ ರುಜುವಾತಾಯಿತು. ಅದಕ್ಕೆ ಅವರು ಒಂದಿಷ್ಟು ಹಣವನ್ನು ದಂಡವನ್ನಾಗಿ ಕಟ್ಟುವ ಪ್ರಮೇಯವೂ ಬಂತು. ರಾಜೀ ಪಂಚಾಯಿತಿಯ ನಂತರ ಚಿತ್ರೀಕರಣವೇನೋ ಸಾಂಗವಾಗಿ ಮುಗಿಯಿತೆನ್ನಿ. ಆದರೆ, ಚಿತ್ರ ಮಕಾಡೆಯಾಯಿತು. 'ಒಂದು ಎಲಿಮೆಂಟು ಇಟ್ಟುಕೊಂಡು ಸಿನಿಮಾ ಮಾಡಿಬಿಟ್ಟರೆ ಗೆಲ್ಲುತ್ತದೇನಾ' ಎಂಬ ಪ್ರಶ್ನಾರ್ಥಕ ಒಂದು ಸಾಲಿನ ವಿಮರ್ಶೆ ಜನರಿಂದ ಬರತೊಡಗಿತು.

ಆಮೇಲೆ ಆ ನಿರ್ದೇಶಕರು ಸಣ್ಣ ಬಜೆಟ್ ಚಿತ್ರಗಳತ್ತ ವಾಲಿದರು. ಪ್ರಶಸ್ತಿ ಪಡೆಯುವ ಸಿನಿಮಾಗಳನ್ನಾದರೂ ಮಾಡಬೇಕು ಎಂದು ಸಂಕಲ್ಪಮಾಡಿದರು. ಈಗಲೂ ಈ ನಿಟ್ಟಿನಲ್ಲಿ ಅವರ ಪ್ರಯತ್ನ ಮುಂದುವರಿದಿದೆ.

● **ವಿಶಾಖ ಎನ್.**

Printed and Published by B.A. Ravi on behalf of **The Printers (Mysore) Private Ltd.** Printed at M/s.Geetanjali Graphics # B-71, New No.84, KSSIDC, Indl. Estate, 6th Block, Rajajinagar, Bengaluru-560010. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: **K.N. SHANTH KUMAR.**

Editorial Office: 75, M.G Road, Bengaluru-560 001 E-mail:editormy@mayura.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited. RNI No 17129/68